# ಹೀರೋಗಳ ಪೈಪೋಟಿ



ಸಾಮಾನ್ಯವಾಗಿ ಸಲ್ಮಾನ್ ಖಾನ್ ಅಭಿನಯದ ಸಿನಿಮಾ ಬಿಡುಗಡೆಯಾಗುವ ಸಮಯದಲ್ಲಿ ಬಾಲಿವುಡ್‌ನ ಇತರ ತಾರೆಯರು ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡುವುದಿಲ್ಲ. ಆದರೆ ಈ ಸಲ 'ದಬಾಂಗ್–3' ಬೆನ್ನಲ್ಲೇ ಅಕ್ಷಯ ಕುಮಾರ್ ಅಭಿನಯದ 'ಗುಡ್ ನ್ಯೂಸ್' ಸ್ಪರ್ಧೆ ನೀಡುತ್ತಿದೆ. ಬಾಕ್ಸಾಫೀಸ್ ಕಲೆಕ್ಷನ್ ವಿಷಯದಲ್ಲಿ ಇಬ್ಬರು ಹೀರೋಗಳೂ ಗಟ್ಟಿಗರೇ. 'ದಬಾಂಗ್–3' ನಿರೀಕ್ಷೆ ಮೀರಿ ಎರಡು ವಾರಕ್ಕಿಂತ ಹೆಚ್ಚು ಕಚ್ಚಿಕೊಂಡರೆ ಅಕ್ಷಯ್ ಪಾಲಿಗೆ ಹೊಸ ಸಿನಿಮಾ 'ಬ್ಯಾಡ್ ನ್ಯೂಸ್' ಆಗುವ ಸಾಧ್ಯತೆಯೂ ಇದೆ.

ಬಾಲಿವುಡ್‌ನಲ್ಲಿ ಕಂಡು ಬಂದಿರುವ ಇಂತಹ ಪೈಪೋಟಿ ಇತ್ತ ತೆಲುಗು ಚಿತ್ರರಂಗದಲ್ಲೂ ಜನವರಿ 2ನೇ ವಾರದಲ್ಲಿ ಕಾಣಿಸಿಕೊಳ್ಳಲಿದೆ. ಅಲ್ಲು ಅರ್ಜುನ್ ಅಭಿನಯದ 'ಅಲಾ ವೈಕುಂಠಾಪುರ್ರಮಿಲೋ' ಚಿತ್ರದ ಜನವರಿ ಎರಡನೇ ವಾರದಲ್ಲಿ ತೆರೆ ಕಾಣಲಿದೆ. ಅದೇ ದಿನ ಮಹೇಶ್ ಬಾಬು ಅಭಿನಯದ 'ಸರಿಲೇರಿ ನೀಕೆವ್ವರು' ಕೂಡಾ ತೆರೆಗೆ ಬರಲಿದ್ದು, ಟಾಲಿವುಡ್‌ನ ಇಬ್ಬರು ಅತಿರಥ ನಟರ ಪೈಪೋಟಿಯನ್ನು ತೆಲುಗು ಚಿತ್ರಪ್ರೇಮಿಗಳು ಕುತೂಹಲದಿಂದ ಕಾಯುತ್ತಿದ್ದಾರೆ.

ಈ ಪೈಪೋಟಿಯಲ್ಲಿ ಅಲ್ಲು ಅರ್ಜುನ್ ಒಂದು ಹೆಜ್ಜೆ ಮುಂದೆಯೇ ಇರುವಂತೆ ಕಾಣಿಸುತ್ತಿದೆ. ಅದಕ್ಕೆ ಕಾರಣ 'ವೈಕುಂಠಾಪುರ್ರಮಿಲೋ' ಚಿತ್ರದ 'ರಾಮುಲೋ ರಾಮುಲಾ..' ಎನ್ನುವ ಹಾಡು ಈಗಾಗಲೆ ಚಿತ್ರಪ್ರೇಮಿಗಳ ಮನಸ್ಸು ಗೆದ್ದಿರುವುದು. ಈ ಹಾಡಿನ ವೀಡಿಯೋ ಈಗಾಗಲೆ 10 ಕೋಟಿ ವೀಕ್ಷಕರನ್ನು ಸೆಳೆದಿದ್ದು, ತೆಲುಗಿನಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ಅತ್ಯಧಿಕ ವೀಕ್ಷಕರನ್ನು ಸೆಳೆದ ಹಾಡು ಎಂದು ದಾಖಲೆ ನಿರ್ಮಿಸಿದೆ. ಇದಕ್ಕೂ ಮುನ್ನ ಇದೇ ಸಿನಿಮಾದ 'ಸಮಾಜವಾರಗಮನ..' ಹಾಡಿವ ವೀಡಿಯೊ ಕೂಡಾ 10 ಕೋಟಿ ವೀಕ್ಷಕರನ್ನು ತಲುಪಿ ಸುದ್ದಿ ಮಾಡಿತ್ತು. ಈ ಸಿನಿಮಾ ಹಾಡುಗಳಿಂದಲೇ ಗೆಲ್ಲುವ ಹಾಗೆ ಕಾಣುತ್ತಿದೆ.



# ಮಿಂಚುತ್ತಿರುವ ಕಿಯಾರಾ

ಬಾಲಿವುಡ್‌ನ ಸುರಸುಂದರಿ ಕಿಯಾರ ಆಡ್ವಾಣಿ ಸದ್ಯಕ್ಕೆ ತುಂಬ ಬ್ಯುಸಿ. 'ಕಬೀರ್ ಸಿಂಗ್' ಯಶಸ್ವಿಯಾದದ್ದೇ ತಡ, ಆಕೆಗೀಗ ಡಿಮ್ಯಾಂಡಪ್ಪೋ ಡಿಮ್ಯಾಂಡು. ಸಲ್ಮಾನ್ ಖಾನ್–ಸೋನಾಕ್ಷಿ ಸಿನ್ಹಾ– ಸುದೀಪ್ ಅಭಿನಯದ 'ದಬಾಂಗ್–3' ಬಿಡುಗಡೆಯ ಬೆನ್ನಲ್ಲೇ ತೆರೆಗೆ ಬಂದಿರುವ ಅಕ್ಷಯ ಕುಮಾರ್ ಅಭಿನಯದ ಚಿತ್ರ 'ಗುಡ್ ನ್ಯೂಸ್'ನಲ್ಲಿ ಕಿಯಾರಾಳದ್ದೂ ಪ್ರಮುಖ ಪಾತ್ರವಿದೆ. ಈ ಚಿತ್ರದಲ್ಲಿ ಈಕೆಗೆ ದಿಲ್ಜಿತ್ ದೂಸಾಂಜ್ ಜೋಡಿ. ಅಕ್ಷಯ ಕುಮಾರ್ ಈ ವರ್ಷ ನಟಿಸಿದ ಬಹುತೇಕ ಎಲ್ಲ ಚಿತ್ರಗಳೂ ಬಾಕ್ಸಾಫೀಸ್‌ನಲ್ಲಿ ಹಿಟ್ ಆಗಿರುವ ಹಿನ್ನೆಲೆಯಲ್ಲಿ ಈ ಚಿತ್ರವೂ ಗೆಲ್ಲುವ ನಿರೀಕ್ಷೆ ಇದೆ. ಗೆದ್ದರೆ ಅತ್ಯಧಿಕ ಲಾಭ ಸಿಗುವುದು ಕಿಯಾರಾಗೆ ಎನ್ನುತ್ತಿದ್ದಾರೆ ಬಾಲಿವುಡ್ ಪಂಡಿತರು.

ಕಿಯಾರಾ ನಟಿಸುತ್ತಿರುವ ಚಿತ್ರಗಳ ಪಟ್ಟಿ ನೋಡಿ ಉಳಿದ ಹೀರೋಯಿನ್‌ಗಳೂ ಅಚ್ಚರಿಪಟ್ಟಿದ್ದಾರೆ. 'ಇಂದೂ ಕಿ ಜವಾನಿ', 'ಭೂಲ್ ಭುಲೈಯ 2', 'ಲಕ್ಷ್ಮೀ ಬಾಂಬ್' ಮತ್ತು 'ಶೇರ್‌ಶಹಾ' ಚಿತ್ರಗಳಿಗೆ ಸಹಿ ಹಾಕಿರುವ ಕಿಯಾರಾ, 2020ರಲ್ಲಿ ಬಹುತೇಕ ಬಾಲಿವುಡ್‌ನ ಮುಂಚೂಣಿಯ ನಟಿಯಾಗುವುದು ಖಚಿತ. ಏಕಕಾಲಕ್ಕೆ ಸುಶಾಂತ್ ಸಿಂಗ್, ಶಾಹಿದ್ ಕಪೂರ್ ಮತ್ತು ಅಕ್ಷಯ್‌ರಂತಹ ಬಾಲಿವುಡ್‌ನ ಪ್ರಮುಖ ಹೀರೋಗಳ ಜೊತೆ ನಟಿಸುತ್ತಿರುವ ಅವಕಾಶ ಎಲ್ಲರಿಗೂ ಸುಲಭದಲ್ಲಿ ದಕ್ಕುವುದಿಲ್ಲ.

'ಕಬೀರ್ ಸಿಂಗ್'ನ ಪ್ರೀತಿ ಎಂಬ ಹುಡುಗಿಯ ಪಾತ್ರ ಕಿಯಾರಾಗೆ ಅಪಾರ ಜನಪ್ರಿಯತೆ ತಂದುಕೊಟ್ಟಿರುವುದು ಸುಳ್ಳಲ್ಲ. ಚಂಡೀಗಢದಲ್ಲಿ ಇತ್ತೀಚೆಗೆ ಸಮಾರಂಭವೊಂದಕ್ಕೆ ಆಕೆ ಹೋದಾಗ 8000ಕ್ಕೂ ಹೆಚ್ಚು ಜನ ಸೇರಿದ್ದು 'ಪ್ರೀತಿ.. ಪ್ರೀತಿ' ಎಂದು ಘೋಷಣೆ ಕೂಗುತ್ತಿದ್ದರಂತೆ. ಇದು ಆಕೆಯ ಆತ್ಮವಿಶ್ವಾಸವನ್ನೂ ಹೆಚ್ಚಿಸಿದೆ. 'ರಣಬೀರ್ ಕಪೂರ್, ರಣವೀರ್ ಸಿಂಗ್ ಮತ್ತು ಅಮಿತಾಭ್ ಸರ್ ಜೊತೆಗೂ ನಟಿಸಬೇಕು ಎನ್ನುವುದು ನನ್ನ ಆಸೆ' ಎಂದಿದ್ದಾಳೆ ಆಕೆ.

■ ಬಿಂದು